1) ಕಾರ್ಡಿಯಾಲಜಿಸ್ಟ್ (ಪಿಜೀಷಿಯನ್)
2) ಪೆಥಾಲಜಿಸ್ಟ್
3) ಬಯೋಕೆಮಿಸ್ಟ್
4) ಸೈಕಿಯಟ್ರಿಸ್ಟ್
ಇ) ಇಲ್ಲ

ಗ್ರಾಮ ಪಂಚಾಯ್ತಿಗಳ ಕಾರ್ಯದರ್ಶಿಗಳ ನೇಮಕ

132 (212) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು;

ಆ) ಎಲ್ಲಾ ಗ್ರಾಮ ಪಂಚಾಯತ್ತಿಗಳಿಗೂ ಪ್ರತ್ಯೇಕ ಕಾರ್ಯದರ್ಶಿಗಳು ಇರುವರೇ;

ಇ) ಇಲ್ಲದೇ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಜಾಗಕ್ಕೆ ಯಾವ ವ್ಯವಸ್ಥೆ ಮಾಡಲಾಗಿದೆ;

ಈ) ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ವ್ಯಾಪ್ತಿಯಲ್ಲಿ 4–5 ಗ್ರಾಮ ಪಂಚಾಯ್ತಿಗೊಬ್ಬ ಕಾರ್ಯದರ್ಶಿಗಳು ಪ್ರಭಾರ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ;

ಉ) ಇದಕ್ಕೆ ಕಾರಣವೇನು; ಈ ವ್ಯವಸ್ಥೆ ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಯಾವಾಗ ಭರ್ತಿ ಮಾಡಿಕೊಳ್ಳಲಾಗುತ್ತದೆ; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗುವುದು;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 5653 (ಮಂಜೂರಾದ ಹುದ್ದೆಗಳು)

ಆ) ಇರುವುದಿಲ್ಲ.

ಇ) ಅಧಿಕ ಪ್ರಭಾರದ ವ್ಯವಸ್ಥೆ ಮಾಡಲಾಗಿದೆ.

ಈ) ಇಲ್ಲ. ಕಲಘಟಗಿ ತಾಲ್ಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 27 ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳಿದ್ದು, ಎಲ್ಲಾ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳು ಭರ್ತಿಯಾಗಿದೆ.

ಉ) ಗ್ರಾಮ ಪಂಚಾಯತಿ ಕಾರ್ಯದರ್ಶಿ ಹುದ್ದೆಗಳನ್ನು ತ್ವರಿತವಾಗಿ ತುಂಬುವ ಸಂಬಂಧ ಈಗಾಗಲೇ ಬಿಲ್ ಕಲೆಕ್ಟರ್ ವೃಂದದಿಂದ ತುಂಬುವ ಹುದ್ದೆಗಳ ಅನುಪಾತವನ್ನು ಶೇ. 30 ರಿಂದ ಶೇ. 40 ಕ್ಕೆ ಏರಿಸಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೂ ಹುದ್ದೆ ಭರ್ತಿ ಮಾಡುವಂತೆ ದಿನಾಂಕ: 07–11–2003 ರಂದು ಆದೇಶಿಸಲಾಗಿದೆ. ಇದೇ ರೀತಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಜಿಲ್ಲಾ ಪಂಚಾಯಿತಿಗಳು ಭರ್ತಿ ಮಾಡುತ್ತಿವೆ.

ಊ) ಮೇಲೆ ತಿಳಿಸಿದಂತೆ ಕ್ರಮ ವಹಿಸಲಾಗಿದೆ.

ಚಿಂತಾಮಣಿ ತಾಲ್ಲೂಕಿನ ಕೆರೆ ಕಟ್ಟೆ ಮತ್ತು ಕುಂಟೆಗಳ ದುರಸ್ತಿ

133 (121) : ಶ್ರೀ ಚೌಡಾರೆಡ್ಡಿ, (ಚಿಂತಾಮಣಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನ ನಾಲ್ಕು ಹೋಬಳಿ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಕೆಲವು ತಿಂಗಳ ಹಿಂದೆ ಮಳೆಯಿಂದ ಎಷ್ಟು ಜಿಲ್ಲಾ ಪಂಚಾಯಿತಿ ಕೆರೆ ಕಟ್ಟೆಗಳು ಒಡೆದು ನೀರು ಪೋಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;